

ಸಾಲದ ಶೂಲ ಏರಿತ್ತು. ತಂಗಿಗೆ ಆಗಬೇಕಿತ್ತು. ಕೊನೆಯ ತಮ್ಮ ಗಣೇಶ ಓದುತ್ತಿದ್ದ. ಮುತ್ತುಸ್ವಾಮಿಗೆ ತನ್ನ ನಾಲ್ವರು ಮಕ್ಕಳಲ್ಲಿ ಒಬ್ಬರನ್ನಾದರೂ ಚೆನ್ನಾಗಿ ಓದಿಸಬೇಕೆಂಬ ಉತ್ಕಟವಾದ ಬಯಕೆ ಇತ್ತು. ಒಬ್ಬ ಓದಿ ಜಾಣ ಆಗಿ ನೆಲೆ ಕಂಡ್ರೆ ನಮ್ಮನ್ನೆಲ್ಲಾ ಉದ್ಧಾರ ಮಾಡ್ತಾನೆ ಎನ್ನುವುದು ಅವನ ಮಹದಾಸೆ. ಕುಪ್ಪುಸ್ವಾಮಿಗೆ ಒತ್ತಾಯಿಸಿದ್ದಿತ್ತು. ಆದರೆ ಇವನಿಗೂ ಲೆಕ್ಕಕ್ಕೂ ನಂಟು ಅಂಟಲೇ ಇಲ್ಲ. ಇಂಗ್ಲೀಷು ತಲೆ ಕೆಡಿಸಿತೇ ವಿನಾ ತಲೆಯೊಳಗೆ ಸೇರಲಿಲ್ಲ. ಹದಿಮೂರು ವರ್ಷಕ್ಕೇ ಮನೆಯಲ್ಲಿನ ಸಂಕಟ ತೀವ್ರವಾಯಿತು. ಮುತ್ತುಸ್ವಾಮಿಯ ಎಣ್ಣೆಯ ಚಟ ಹೆಚ್ಚಾಯಿತು. ಅವರಪ್ಪ, ಅಮ್ಮನ ಅನಾರೋಗ್ಯ... ಔಷಧಿಗಳಿಗೆ ದುಡ್ಡು ಸುರಿಯಬೇಕಿತ್ತು. ಕುಪ್ಪಣ್ಣ ಸೀದಾ ಹೋಗಿ ಮೇಸ್ತ್ರಿಯ ಬಳಿ ಕೆಲಸಕ್ಕೆ ಸೇರಿಕೊಂಡ. ಜೊತೆಗೆ ತಮ್ಮನನ್ನಾದರೂ ಚೆನ್ನಾಗಿ ಓದಿಸುತ್ತೇನೆಂದು ಶಪಥ ಮಾಡಿದ.

ಕಾಲ ಸರಿಯುತ್ತಿದ್ದಂತೆ ಅಕ್ಕನ ಸಾಲದ ಜೊತೆ ತಂಗಿಯ ಮದುವೆಯ ಸಾಲವೂ ಹೆಗಲೇರಿತ್ತು. ಅಜ್ಜಿ, ತಾತ ಪರಲೋಕವಾಸಿಗಳಾಗಿದ್ದರು. ಈಗ ಮನೆಯವರೆಲ್ಲರ ದೃಷ್ಟಿ ಗಣೇಶನ ಮೇಲೆ ಕೇಂದ್ರೀಕೃತವಾಗಿತ್ತು. ಅದಕ್ಕೆ ತಕ್ಕಂತೆ ಅವನು ಚೆನ್ನಾಗಿಯೇ ಓದುತ್ತಿದ್ದ. ಫೀಸು, ಪುಸ್ತಕಗಳಿಗೆ ದುಡ್ಡನ್ನೆಲ್ಲ ಕುಪ್ಪಣ್ಣ ಕಷ್ಟಪಟ್ಟಾದರೂ ಒದಗಿಸುತ್ತಿದ್ದ. ತನಗೆ ಒಂದೇ ಅಂಗಿ ಇದ್ದರೂ ಕಾಲೇಜು ಓದುವ ತಮ್ಮನಿಗೆ ನಾಲ್ಕು ತರುತ್ತಿದ್ದ. ಗಣೇಶ ಬಿ.ಕಾಂ. ಮುಗಿಸಿ ಎಂ.ಬಿ.ಎ. ಓದಿದಾಗ ಒಳ್ಳೆಯ ಕಂಪನಿಯಲ್ಲಿ ಕೆಲಸವೂ ದೊರೆಯಿತು. ಮುತ್ತುಸ್ವಾಮಿಗೆ, ಕುಪ್ಪಣ್ಣನಿಗೆ ಕೋಡು ಮೂಡುವುದೊಂದೇ ಬಾಕಿ. ಮನೆದೇವರಿಗೆ ಹರಕೆ ಮುಟ್ಟಿಸಿದ್ದಾಯಿತು. ಎಲ್ಲರ ಉತ್ಸಾಹ ಜರ್‍ರನೆ ಇಳಿದದ್ದು ಗಣೇಶ 'ಸಹಪಾಠಿ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿದ್ದೇನೆ' ಎಂದಾಗ. ಅವಳನ್ನೇ ಮದುವೆಯಾಗಲು ನಿರ್ಧರಿಸಿದಾಗ ಎಲ್ಲರೂ ಮಾತಿಲ್ಲದಂತೆ ಮೌನವಾದರು. ತಾಯಿಯ ಕಣ್ಣೀರು ಅಸ್ತ್ರವಾಗಲಿಲ್ಲ. ದೊಡ್ಡವರ ಮನೆ ಮದುವೆ ಜೋರಾಗಿ ನಡೆದೇ ಹೋಯಿತು. ಮುತ್ತುಸ್ವಾಮಿ ಮತ್ತು ಕುಟುಂಬದವರೆಲ್ಲ ದೊಡ್ಡ ಛತ್ರದಲ್ಲಿ ಅಪರಿಚಿತರಂತೆ ಮೂಲೆಯಲ್ಲಿ ನಿಂತು... ಊಟ ಮಾಡಿ... ಒಂದು ಫೋಟೊ ತೆಗೆಸಿಕೊಂಡು ಬಂದದ್ದಷ್ಟೇ ಭಾಗ್ಯ.

ಹೊಸ ಸೊಸೆ ಇವರ ಮನೆ ಮೆಟ್ಟಿಲನ್ನೇ ತುಳಿಯಲಿಲ್ಲ. ಮುಂದೆ ಕಂಪನಿ ಗಣೇಶನನ್ನು ಮುಂಬೈಗೆ ವರ್ಗ ಮಾಡಿತು. ಹೆಂಡತಿಯೊಂದಿಗೆ ಹೊರಟು ಅವನು ಸಂಸಾರವನ್ನೂ ಹೂಡಿದ. ಬಲು ಆಸೆಯಿಂದ ಅವರನ್ನು ನೋಡಲು ಹೋದ ಮುತ್ತುಸ್ವಾಮಿ ಮತ್ತವನ ಪತ್ನಿ ಕೆಲಸದವರ ಸ್ಥಾನ ಪಡೆದು ಅವಮಾನಿತರಾದರಂತೆ. ಅದಕ್ಕೆ ಗಣೇಶನದ್ದು ಒಂದೂ ಮಾತಿಲ್ಲವಂತೆ. ನೊಂದು ತಿರುಗಿ ಬಂದವರು ಅವನ ಹೆಸರೆತ್ತಲಿಲ್ಲ. ಕುಪ್ಪಣ್ಣನ ಬಳಿಯೇ ಬೀಡುಬಿಟ್ಟರು. ಗಣೇಶನೂ ಅವರ ಸಂಪರ್ಕವನ್ನೇ ಕಡಿದುಕೊಂಡ. ಒಮ್ಮೆ ಬೆಂಗಳೂರಿನ ಸ್ಟಾರ್ ಹೋಟೆಲ್‌ನಲ್ಲಿ ಕೆಲಸ ನಡೆಯುತ್ತಿದ್ದಾಗ ಗಣೇಶ ಕಂಡಿದ್ದ. ಸೂಟು ಬೂಟು ತೊಟ್ಟವರ ಮಧ್ಯೆ ಬಂದವ ಜಲ್ಲಿಕಲ್ಲುಗಳ ಮಧ್ಯೆ ಕೆಲಸ ಮಾಡುತ್ತಿದ್ದ ಅಣ್ಣನನ್ನು ನೋಡಿಯೂ ನೋಡದಂತೆ ಹೋಗಿದ್ದ. ಅಲ್ಲಿಗೆ ಕೊಂಡಿ ಸಂಪೂರ್ಣ ಕಳಚಿಕೊಂಡಿತ್ತು.

ನೊಂದು ಬೆಂದರೂ ಕುಪ್ಪಣ್ಣ ಛಲ ಬಿಡಲಿಲ್ಲ. ಅದೀಗ ಬೆಳೆಯುತ್ತಿದ್ದ ಕುಡಿ... ತನ್ನ ಮಗ...